**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

## ಕ್ರಿ ಮೊ ಸಂಖ್ಯೆ 2200/2022

ಪಿರ್ಯಾದಿ ಃ ರಾಜ್ಯದ ಪರವಾಗಿ ಪೊಲೀಸರು

-ವಿರುದ್ಧ-

ಆರೋಪಿ/ತರು ಃ ಅಶೋಕ.ಪಿ. ಬಿನ್ ಪರಶುರಾಮ

**ದಂ.ಪ್ರ.ಸಂ. ಕಲಂ 313 ರಡಿಯಲ್ಲಿ ಆರೋಪಿಯ ವಿಚಾರಣಾ ಹೇಳಿಕೆ**

ಪ್ರಶ್ನೆ-1ಃ ಅಭಿಯೋಜನೆ ಪರ ಸಾಕ್ಷಿಗಳ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?
ಉತ್ತರ ಃ ಹೌದು

ಪ್ರಶ್ನೆ-2ಃ ಪ್ರಾಸಾ-1 ಮಹೇಂದ್ರ.ಎಂ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 23.05.2023 ರಂದು ತನ್ನ ತಾಯಿ ರಂಗೇನಹಳ್ಳಿಯಿಂದ ಸಂತೆ ಮುಗಿಸಿಕೊಂಡು ನಡೆದುಕೊಂಡು ಹೋಗುತ್ತಿದ್ದು, ಅವರ ಜೊತೆ ತಾನು ಸಹ ಇದ್ದು, ತಾನು ಅವರಿಂದ 10 ಅಡಿ ಮುಂದೆ ಮೆಣಸಿನಕಾಯಿ ಚೀಲ ಹಿಡಿದುಕೊಂಡು ಹೋಗುತ್ತಿದ್ದೆ, ಅವರು ತನ್ನ ಹಿಂದೆ ನಡೆದುಕೊಂಡು ಬರುತ್ತಿದ್ದರು, ಹಿಂದಿನಿಂದ ಅಶೋಕ್ ಎಂಬುವವರು ಒಂದು ದ್ವಿಚಕ್ರ ವಾಹನ ವನ್ನು ಜೋರಾಗಿ ಓಡಿಸಿಕೊಂಡು ಬಂದು ತನ್ನ ತಾಯಿಗೆ ಗುದ್ದಿಸಿದ ಕಾರಣ ಅವರು 10 ಅಡಿ ದೂರಕ್ಕೆ ಉಜ್ಜಿಕೊಂಡು ಹೋಗಿ ಬಿದ್ದಿದ್ದರು ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃ ಸುಳ್ಳು

ಪ್ರಶ್ನೆ-3 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತಕ್ಷಣ ತಾನು ಓಡಿ ಹೋಗಿ ಅವರನ್ನು ನೋಡಿದ್ದು, ಅವರ ತಲೆಗೆ ಬಲವಾದ ಪೆಟ್ಟಾದ ಕಾರಣ ಅಲ್ಲೇ ಇದ್ದ ಕರಾವಳಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆಯನ್ನು ಕೊಡಿಸಿ, ಅಲ್ಲಿಂದ ಶಿವಮೊಗ್ಗದ ಮೆಟ್ರೋ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿ 6 ದಿನಗಳ ಕಾಲ ಚಿಕಿತ್ಸೆ ನೀಡಿದ್ದು, ಚಿಕಿತ್ಸೆ ಫಲಕಾರಿಯಾಗದೆ ತನ್ನ ತಾಯಿ ಮೃತಪಟ್ಟಿರುತ್ತಾರೆ, ನಂತರ ಅವರ ಮೃತ ದೇಹವನ್ನು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿ ಶವಪಂಚನಾಮೆ ಜರುಗಿಸಿ ಮನೆಗೆ ಕಳುಹಿಸಿಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃ ಸುಳ್ಳು

ಪ್ರಶ್ನೆ-4 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 24.5.2023 ರಂದು ತಾನು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ,

ದೂರನ್ನು ನೀಡಿದ ದಿನವೇ ಪೊಲೀಸರು ಬಂದು ಮಹಜರು ಕ್ರಮವನ್ನು ಸ್ಥಳದಲ್ಲಿ ಜರುಗಿಸಿರುತ್ತಾರೆ, ಆದಾದ ನಂತರ 2 ತಿಂಗಳು ಬಿಟ್ಟು ಪೊಲೀಸರು ಮತ್ತೆ ಮಹಜರು ಕ್ರಮವನ್ನು ಜರುಗಿಸಿರುತ್ತಾರೆ, ತನ್ನ ತಾಯಿ ಮೃತಪಟ್ಟ ನಂತರ ಮತ್ತೊಂದು ದೂರನ್ನು ತಾನು ಪೊಲೀಸರಿಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-5 ಃ ಪ್ರಾಸಾ-2 ಕೃಷ್ಣಮೂರ್ತಿ ಇವರು ತಮ್ಮ ಸಾಕ್ಷ್ಯದಲ್ಲಿ, ಈಗ್ಗೆ ಸುಮಾರು ಮೂರು ವರ್ಷಗಳ ಹಿಂದೆ ತಾನು ರಂಗೇನಹಳ್ಳಿ ಗ್ರಾಮದಲ್ಲಿ ಸಂಜೆ 04.00 ಗಂಟೆ ಸಮಯದಲ್ಲಿ ಅಪಘಾತವಾದ ವಿಚಾರವಾಗಿ ಪೊಲೀಸರು ಒಂದು ದಾಖಲಾತಿಗೆ ಸಹಿ ಮಾಡಿಸಿಕೊಂಡಿದ್ದು, ತನ್ನ ಜೊತೆ ಚಾಸಾ-10 ರವರು ಸಹಿ ಮಾಡಿರುತ್ತಾರೆ, ಮಹಜರಿನಲ್ಲಿ ಬರೆದಿರುವ ವಿಚಾರ ತನಗೆ ತಿಳಿದಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-6 ಃ ಪ್ರಾಸಾ-3 ಪರಮೇಶ್ವರಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ, ಈಗ್ಗೆ ಸುಮಾರು ಮೂರು ವರ್ಷಗಳ ಹಿಂದೆ ತಾನು ರಂಗೇನಹಳ್ಳಿ ಗ್ರಾಮದಲ್ಲಿ ಸಂಜೆ 04.00 ಗಂಟೆ ಸಮಯದಲ್ಲಿ ಅಪಘಾತವಾದ ವಿಚಾರವಾಗಿ ಪೊಲೀಸರು ಒಂದು ದಾಖಲಾತಿಗೆ ಸಹಿ ಮಾಡಿಸಿಕೊಂಡಿದ್ದು, ತನ್ನ ಜೊತೆ ಚಾಸಾ-9 ರವರು ಸಹಿ ಮಾಡಿರುತ್ತಾರೆ, ಮಹಜರಿನಲ್ಲಿ ಬರೆದಿರುವ ವಿಚಾರ ತನಗೆ ತಿಳಿದಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-7 ಃ ಪ್ರಾಸಾ-6 ಧರಣೇಶ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 23.05.2023 ರಂದು ಸೋಮವಾರ ಸಂಜೆ 05.00 ಗಂಟೆಗೆ ರಂಗೇನಹಳ್ಳಿ ಸಂತೆ ಮಾರ್ಕೆಟ್ ನಲ್ಲಿ ಅಪಘಾತವಾಗಿದ್ದನ್ನು ತಾನು ನೋಡಿದ್ದು, ಆರೋಪಿಯಾದ ನೀವು ನಿಮ್ಮ ಬಾಬ್ತು ಬೈಕಿನಿಂದ ಪಾರ್ವತಮ್ಮನವರಿಗೆ ಗುದ್ದಿ ಅಪಘಾತಪಡಿಸಿರುತ್ತೀರಿ, ಪಾರ್ವತಮ್ಮನವರಿಗೆ ತಲೆಗೆ ತೀವ್ರ ತರಹದ ಪೆಟ್ಟಾಗಿದ್ದು, ತಾವೇ ಪಾರ್ವತಮ್ಮನವರನ್ನು ಶಿವಮೊಗ್ಗದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ, ಪಾರ್ವತಮ್ಮನವರು ಕೋಮಕ್ಕೆ ಹೋಗಿದ್ದು, ನಂತರ 8 ದಿನಗಳ ನಂತರ ಮೃತಪಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-8 ಃ ಪ್ರಾಸಾ-7 ರವಿಕುಮಾರ್ ಇವರು ತಮ್ಮ ಸಾಕ್ಷ್ಯದಲ್ಲಿ, ಈಗ್ಗೆ ಸುಮಾರು ಮೂರು ವರ್ಷಗಳ ಹಿಂದೆ ರಂಗೇನಹಳ್ಳಿಯ ಸಂತೆ ಹತ್ತಿರ ಸಂಜೆ 05.30 – 06.00 ಗಂಟೆ ಸಮಯದಲ್ಲಿ ಮುಖ್ಯ ರಸ್ತೆಯಲ್ಲಿ ಸ್ಪೆಂಡರ್ ದ್ವಿಚಕ್ರ ವಾಹನವು ಬಾವಿಕೆರೆ ಕಡೆಯಿಂದ ಬಂದು ಚಾಸಾ-1 ರವರ ತಾಯಿಯಾದ ಪಾರ್ವತಮ್ಮನವರನ್ನು ಗುದ್ದಿದ ಪರಿಣಾಮ ಅವರು ಅಲ್ಲೇ ಜ್ಞಾನ ತಪ್ಪಿ ಬಿದ್ದಿರುತ್ತಾರೆ, ಅವರನ್ನು ರಂಗೇನಹಳ್ಳಿಯ

ಕರಾವಳಿ ಆಸ್ಪತ್ರೆಗೆ ತೋರಿಸಿ, ನಂತರ ಶಿವಮೊಗ್ಗದ ಮೆಟ್ರೋ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ, ಶಿವಮೊಗ್ಗದ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಪಾರ್ವತಮ್ಮ ಮೃತಪಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-9 ಃ ಪ್ರಾಸಾ-8 ಈಶ್ವರ್, ವಾಹನ ನಿರೀಕ್ಷಕರು ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 19.05.2022 ರಂದು ಚಾಸಾ-21 ರವರ ಮನವಿ ಮೇರೆಗೆ ಬೆಳಿಗ್ಗೆ 11.00 ಗಂಟೆಗೆ ಲಕ್ಕವಳ್ಳಿ ಠಾಣಾ ಆವರಣಕ್ಕೆ ಭೇಟಿ ಕೊಟ್ಟು ಕೆಏ14/ಇಯು-3503 ರ ಮೋಟಾರ್ ಸೈಕಲ್ ವಾಹನವನ್ನು ತಪಾಸಣೆಗೆ ಒಳಪಡಿಸಿದಾಗ ಸದರಿ ವಾಹನದ ಮುಂದಿನ ಎಡಬದಿಯ ಕ್ಲಚ್ ಕೇಬಲ್ ಹೊಲ್ಡಿಂಗ್ ಹೊಡೆದುಹೋಗಿತ್ತು, ತಾನು ಸದರಿ ವಾಹನವನ್ನು ನಿಂತಲ್ಲೇ ಪರೀಕ್ಷೆ ಮಾಡಿದಾಗ ಸದರಿ ವಾಹನದ ಬ್ರೇಕ್ ವ್ಯವಸ್ಥೆ ಸರಿಯಾಗಿದ್ದು, ಸದರಿ ಅಪಘಾತವು ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂಬುದಾಗಿ ವರದಿಯನ್ನು ನಿಪಿ-11 ರಂತೆ ಸಲ್ಲಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-10 ಃ ಪ್ರಾಸಾ-9 ಬಿ.ಎಲ್.ಸುರೇಶ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 18.05.2022 ರಂದು ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು 01.15 ಗಂಟೆ ಸಮಯದಲ್ಲಿ ಠಾಣಾ ಮೊಕದ್ದಮೆ ಸಂಖ್ಯೆ 39/2022 ರಂತೆ ಪ್ರಕರಣವನ್ನು ಐ.ಪಿ.ಸಿ. ಕಲಂ 279, 337 ರಡಿಯಲ್ಲಿ ದಾಖಲು ಮಾಡಿ, ಪ್ರಥಮ ವರ್ತಮಾನ ವರದಿಯನ್ನು ತಯಾರು ಮಾಡಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-11 ಃ ಪ್ರಾಸಾ-9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 19.05.2022 ರಂದು 11.00 ಗಂಟೆ ಸಮಯಕ್ಕೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-9 ಮತ್ತು 10 ರವರನ್ನು ಪಂಚರಾಗಿ ಕರೆದುಕೊಂಡು ಅವರ ಸಮಕ್ಷಮ ಕೃತ್ಯ ಸ್ಥಳದಲ್ಲಿ ಮಹಜರು ಕ್ರಮವನ್ನು ಜರುಗಿಸಿ ಕಚ್ಚಾ ನಕ್ಷೆಯನ್ನು ತಯಾರಿಸಿ ಛಾಯಚಿತ್ರವನ್ನು ತೆಗೆಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-12 ಃ ಪ್ರಾಸಾ-9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 20.05.2022 ರಂದು ಅಪಘಾತ ಮಾಡಿದ ವಾಹನ ಕೆಏ14/ಇಯು-3503 ಸ್ಪ್ಲೆಂಡರ್ ಬೈಕನ್ನು ಠಾಣಾ ಅವರಣದಲ್ಲಿ ಪಂಚರಾದ ಚಾಸಾ-11 ಮತ್ತು 12 ರವರ ಸಮಕ್ಷಮ ವಾಹನ ಅಮಾನತ್ತು ಮಹಜರು ಕ್ರಮವನ್ನು ಜರುಗಿಸಿ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ ಹಾಗೂ ಛಾಯಾಚಿತ್ರವನ್ನು

ತೆಗೆಸಿರುತ್ತೇನೆ, ಮುಂದಿನ ಕ್ರಮಕ್ಕಾಗಿ ಕೇಸಿನ ಕಡತವನ್ನು ಚಾಸಾ-20 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃ ಸುಳ್ಳು

ಪ್ರಶ್ನೆ-13 ಃ ಪ್ರಾಸಾ-10 ಹೆಚ್.ಎಸ್.ಸುರೇಶ್, ಡಿವೈ.ಎಸ್.ಪಿ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 25.05.2022 ರಂದು ಈ ಪ್ರಕರಣದ ಕಡತವನ್ನು ಚಾಸಾ-20 ರವರಿಂದ ಪಡೆದುಕೊಂಡು ಪರಿಶೀಲಿಸಿ, ದಿನಾಂಕ 05.06.2022 ರಂದು ಅಪಘಾತಪಡಿಸಿದ ವಾಹನ ಸಂಖ್ಯೆ ಇವಿಃ3503 ಬೈಕಿನ ಐ ಎಂ ವಿ ವರದಿಯನ್ನು ಚಾಸಾ-15 ರವರಿಂದ ಪಡೆದುಕೊಂಡಿರುತ್ತೇನೆ, ದಿನಾಂಕ 15.06.2022 ರಂದು ಸಾಕ್ಷಿದಾರರಾದ ಚಾಸಾ-13 ಮತ್ತು 14 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ, ದಿನಾಂಕ 27.06.2022 ರಂದು ಮೆಗ್ಗಾನ್ ಆಸ್ಪತ್ರೆಯಿಂದ ಅಪಘಾತದಲ್ಲಿ ಮೃತಪಟ್ಟ ಪಾರ್ವತಮ್ಮನವರ ಪಿ.ಎಂ. ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃ ಸುಳ್ಳು

ಪ್ರಶ್ನೆ-14 ಃ ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ತನಿಖೆಯನ್ನು ಮುಕ್ತಾಯಗೊಳಿಸಿ ಆರೋಪಿಯಾದ ನಿಮ್ಮ ಮೇಲೆ ಆರೋಪ ಸಾಬೀತಾದ ಕಾರಣ ಆರೋಪಿಯಾದ ನಿಮ್ಮ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃ ಸುಳ್ಳು

ಪ್ರಶ್ನೆ-15 ಃ ಈ ಕೇಸಿನ ಬಗ್ಗೆ ನೀವು ಏನಾದರೂ ಹೇಳುವುದಿದೆಯಾ?
ಉತ್ತರ ಃ ಇಲ್ಲ

ಪ್ರಶ್ನೆ-16 ಃ ನಿಮ್ಮ ಪರವಾಗಿ ಯಾರಾದರೂ ಸಾಕ್ಷಿಗಳಿದ್ದಾರಾ ಮತ್ತು ಯಾವುದಾದರೂ ದಾಖಲೆಗಳಿವೆಯಾ?
ಉತ್ತರ ಃ ಇಲ್ಲ

(ಈ ಹೇಳಿಕೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಕೇಳಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ನಾನೇ ಯಥಾವತ್ತಾಗಿ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆಯೆಂದು ದೃಢೀಕರಿಸುತ್ತೇನೆ.)

ದಿನಾಂಕ ಃ 05.05.2026

ಸಹಿ
**(ಉರ್ಮಿಳ.ವಿ)**
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.